ಸಂತೇಮಾರನಹಳ್ಳಿ ವಿಧಾನಸಭಾಕ್ಷೇತ್ರದಲ್ಲಿ ಕಾಡಾನೆಯ ತುಳಿತಕ್ಕೆ ಬಲಿಯಾದವರಿಗೆ ಪರಿಹಾರ

ಶ್ರೀ ಎ.ಆರ್. ಕೃಷ್ಣಮೂರ್ತಿ (ಸಂತೆಮಾರನಹಳ್ಳಿ) : ಮಾನ್ಯ ಅಧ್ಯಕ್ಷರೆ, ನಾನು ಸ್ಪರ್ಧಿಸಿರತಕ್ಕಂಥ ಸಂತೇಮಾರನಹಳ್ಳಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಬರತಕ್ಕಂಥ ಕೌಲಂದಿ ಹೋಬಳಿ, ಹುಸ್ಕೂರು ಗ್ರಾಮದಲ್ಲಿ ಇಂದು ಬೆಳಿಗ್ಗೆ 7 ಗಂಟೆಗೆ ಮಹದೇವಶೆಟ್ಟಿ ಬಿನ್ ಮಹದೇವಶೆಟ್ಟಿ ಎಂಬುವವರು ಜಮೀನಿಗೆ ಕೂಲಿ ಕೆಲಸಕ್ಕಾಗಿ ಹೋಗುವಂಥ ಸಂದರ್ಭದಲ್ಲಿ ಕಾಡಾನೆಯ ತುಳಿತಕ್ಕೆ ಬಲಿಯಾಗಿದ್ದಾರೆ ಆದುದರಿಂದ ದುಃಖಭರಿತ ಕುಟುಂಬದವರಿಗೆ ಒಂದು ಲಕ್ಷ ರೂಪಾಯಿಯನ್ನು ಪರಿಹಾರವನ್ನು ನೀಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಗಳು) : ಹಿಂದೆ ಇಂತಹ ದುರಂತ ಆಗಿದ್ದಾಗ ಸರ್ಕಾರ ಯಾವರೀತಿ ಪರಿಹಾರ ಕೊಟ್ಟಿದೆ ಅದಕ್ಕಿಂತ ಉತ್ತಮವಾಗಿ ಕೊಡುತ್ತೇವೆ.

ಅತಿವೃಷ್ಟಿಯಿಂದ ರಸ್ತೆ ಹಾಳಾಗಿರುವ ಬಗ್ಗೆ

ಶ್ರೀ ಅಮರೇಗೌಡ ಲಿಂಗನಗೌಡ ಪಾಟೀಲ್ (ಲಿಂಗಸುಗೂರು) : ಸನ್ಮಾನ್ಯ ಅಧ್ಯಕ್ಷರೆ, 1998ನೇ ಸಾಲಿನ ಅತಿವೃಷ್ಟಿ ಮಳೆಯಿಂದ ರಸ್ತೆಗಳು ಹಾಳಾಗಿದ್ದು, ಹಾನಿಯ ವೆಚ್ಚ ಎಷ್ಟು? ಈ ರಸ್ತೆಗಳನ್ನು ರಿಪೇರಿ ಮಾಡಿಸುವುದಕ್ಕೆ ಖರ್ಚಾದ ಹಣ ಎಷ್ಟು? ಇನ್ನೂ ರಿಪೇರಿಯಾಗದಂಥ ರಸ್ತೆಗಳು ಎಷ್ಟು? ಸದರಿ ಕೆಲಸಗಳಿಗೆ ಕೇಂದ್ರಸರ್ಕಾರದಿಂದ ಎಷ್ಟು ಹಣ ಮಂಜೂರಾಗಿತ್ತು ಅದರಲ್ಲಿ ಎಷ್ಟು ಹಣ ಖರ್ಚಾಗಿದೆ ಎಂಬುದನ್ನು ತಿಳಿಸಬೇಕೆಂದು ಮಾನ್ಯ ಲೋಕೋಪಯೋಗಿ ಸಚಿವರನ್ನು ಕೇಳುತ್ತೇನೆ.

ಅಧ್ಯಕ್ಷರು : ತಾವು ಪ್ರಶ್ನೆಯನ್ನು ಕೇಳುವುದಲ್ಲ.

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಸಚಿವರು) : ಮಾನ್ಯ ಸದಸ್ಯರು ಗಮನ ಸೆಳೆದಿರುವಂತಹದಕ್ಕೆ, ಸುಮಾರು 400 ಕೋಟಿ ರೂಪಾಯಿಗಳನ್ನು ನಬಾರ್ಡ್‌ನ ವತಿಯಿಂದ ತೆಗೆದುಕೊಂಡು ಬಂದಿದ್ದೇವೆ. ಇದಲ್ಲದೆ ಮೊನ್ನೆ ನಮ್ಮ ಕಾಡಾ ಮಂತ್ರಿಗಳಾದ ವೆಂಕಟೇಶ್‌ರವರು ಮತ್ತು ಲೋಕೋಪಯೋಗಿ ಸಚಿವರು ಬೊಂಬಾಯಿಗೆ ಹೋಗಿ ಮತ್ತೆ 100 ಕೋಟಿ ರೂಪಾಯಿಗಳನ್ನು ಹೆಚ್ಚುವರಿಯಾಗಿ ತರತಕ್ಕಂಥದ್ದನ್ನು ಮಾಡಿದ್ದಾರೆ. ಹೆಚ್.ಕೆ.ಡಿ.ಬಿ. ವ್ಯಾಪ್ತಿಯಲ್ಲಿ ಬರತಕ್ಕಂಥ ಶಾಸಕರುಗಳು ತಮ್ಮ ಕ್ಷೇತ್ರದಲ್ಲಿ ಬರತಕ್ಕಂಥ ರಸ್ತೆಗಳ ದುರಸ್ತಿಗಾಗಿ ಒಂದೊಂದು ಕೋಟಿ ರೂಪಾಯಿಯಷ್ಟು ಹಣವನ್ನು ನಬಾರ್ಡ್‌ನಿಂದ ಸಾಲ ತೆಗೆದುಕೊಂಡು ಬಂದಿದ್ದಾರೆ. ಒಟ್ಟು ಇರತಕ್ಕಂಥ ವಿವರಗಳನ್ನು ನಂತರ ತಮಗೆ ಪತ್ರದ ಮುಖೇನ ತಿಳಿಸುತ್ತೇನೆ.

ಮಂಡ್ಯ ಜಿಲ್ಲೆಯಲ್ಲಿ ಕಂದುಜಿಗಿ ಹುಳುವಿನಿಂದ ಭತ್ತದ ಬೆಳೆಗೆ ಹಾನಿ.

ಶ್ರೀ ಜೆ.ಬಿ. ಶಿವಕುಮಾರ್ (ಮಂಡ್ಯ) : ಮಾನ್ಯ ಅಧ್ಯಕ್ಷರೆ, ಮಂಡ್ಯ ಜಿಲ್ಲೆಯ 7 ತಾಲೂಕುಗಳಲ್ಲಿ ಕಂದುಜಿಗಿ ಹುಳ ರೋಗಕ್ಕೆ 338 ಗ್ರಾಮಗಳು, ಸುಮಾರು 6982 ರೈತ ಕುಟುಂಬ, 1283 ಹೆಕ್ಟೇರ್‌ಗೂ